# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 368
2) ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 23-09-2020
4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕರ್ನಾಟಕ ಭಾಗದಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಅನುಕೂಲಕರ ವಾತಾವರಣ ಹಾಗೂ ಅವಕಾಶವಿದ್ದರೂ ಆ ಭಾಗದಲ್ಲಿ ಮೀನುಗಾರಿಕೆಗೆ ಸರ್ಕಾರ ಉತ್ತೇಜನ ನೀಡದಿರಲು ಕಾರಣವೇನು; | ಉತ್ತರ ಕರ್ನಾಟಕ ಭಾಗವು ಮೀನುಗಾರಿಕೆಗೆ ಅನುಕೂಲಕರವಾಗಿ ಹಲವಾರು ಜಲಸಂಪನ್ಮೂಲಗಳು ಹಾಗೂ ನೀರಾವರಿ ನಾಲೆಗಳನ್ನು ಹೊಂದಿರುತ್ತವೆ. ಅಲ್ಲದೆ, ಈ ಭಾಗದ ಜಿಲ್ಲೆಗಳ ಭೂ ಪ್ರದೇಶ, ಮಣ್ಣಿನ ಗುಣ ಲಕ್ಷಣಗಳು ಮೀನುಗಾರಿಕೆಗೆ ಸೂಕ್ತವಾಗಿರುತ್ತದೆ. ಇಲಾಖೆಯಿಂದ ಈ ಭಾಗದಲ್ಲಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಮುಖವಾಗಿ ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ, ಮೀನುಗಾರರಿಗೆ ಉಚಿತ ಸಲಕರಣೆ ಕಿಟ್ಟು, ಹರಿಗೋಲು ವಿತರಣೆ, ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಹಾಗೂ ಕೇಂದ್ರ ಪುರಸ್ಕೃತ ನೀಲಿಕ್ರಾಂತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನಾರಾಯಣಪುರ ಮೀನುಮರಿ ಪಾಲನಾ ಕೇಂದ್ರದ ಉನ್ನತೀಕರಣಕ್ಕೆ ರೂ.4.73 ಕೋಟಿಗಳನ್ನು 2019-20ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.<br><br>ಶಿವಪುರ ಮೀನುಮರಿ ಉತ್ಪಾದನಾ ಕೇಂದ್ರದ ಅಭಿವೃದ್ಧಿಗೆ ರೂ.4.45 ಕೋಟಿ, ನಾರಾಯಣಪುರ ಮೀನುಮರಿ ಪಾಲನಾ ಕೇಂದ್ರದ ಉನ್ನತೀಕರಣಕ್ಕೆ ರೂ.3.65 ಕೋಟಿ, ಇಂಡಿ, ಸಿರಗುಪ್ಪ, ಸಿಂದನೂರು ಮತ್ತು ಯಾದಗಿರಿ ತಾಲ್ಲೂಕು ಕೇಂದ್ರಗಳಲ್ಲಿ ತಲಾ ರೂ.1.00 ಕೋಟಿ ವೆಚ್ಚದಲ್ಲಿ ಆಧುನಿಕ ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ.<br><br>ಉತ್ತರ ಕರ್ನಾಟಕದಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಒತ್ತು ನೀಡುವ ಸಲುವಾಗಿ ಸ್ಥಳೀಯ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಸಲುವಾಗಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯ, ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರವನ್ನು ಬಾಗಲಕೋಟೆ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದ್ದು, ಸದರಿ ಕೇಂದ್ರಕ್ಕೆ ವಿವಿಧ ಶ್ರೇಣಿಯ ಒಟ್ಟು 24 ಹುದ್ದೆಗಳನ್ನು ಸೃಜಿಸಿ ಸ್ಥಳಾಂತರಿಸಲಾಗಿದೆ. ಈ ಕೇಂದ್ರವು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಿಸಿ ಹಲವಾರು ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಆ) | ರಾಜ್ಯದಲ್ಲಿ ಮೀನುಗಾರಿಕಾ ಇಲಾಖೆಯಿಂದ ನಡೆಸಲಾಗುತ್ತಿರುವ (KFDC) ಕ್ಯಾಂಟೀನುಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲಾಗುತ್ತಿರುವ ಮತ್ಸ್ಯದರ್ಶಿನಿಗಳ ಸಂಖ್ಯೆ 08.<br>1. ಕಬ್ಬನ್ ಪಾರ್ಕ್ – ಬೆಂಗಳೂರು<br>2. ರಾಮಮೂರ್ತಿ ನಗರ – ಬೆಂಗಳೂರು<br>3. ಯಲಹಂಕ – ಬೆಂಗಳೂರು<br>4. ಗೋಕುಲ - ಮೈಸೂರು<br>5. ಸಿದ್ದಲಿಂಗಾಪುರ - ಮೈಸೂರು<br>6. ತುಮಕೂರು<br>7. ಶಿವಮೊಗ್ಗ<br>8. ಬಳ್ಳಾರಿ |
| ಇ) | ಉತ್ತರ ಕರ್ನಾಟಕ ಭಾಗದಲ್ಲಿ ಮೀನನ್ನು ಉಪಯೋಗಿಸುವ ಗ್ರಾಹಕರ ಪ್ರಮಾಣ ಸಾಕಷ್ಟಿದ್ದರೂ ಇಲಾಖೆಯ ವತಿಯಿಂದ ನಡೆಸಲ್ಪಡುವ ಕ್ಯಾಂಟೀನುಗಳನ್ನು ಈ ಭಾಗದಲ್ಲಿ ಆರಂಭಿಸದಿರಲು ಕಾರಣವೇನು; | ಉತ್ತರ ಕರ್ನಾಟಕದ ಬಳ್ಳಾರಿಯಲ್ಲಿ ನಿಗಮವು ಪ್ರಸ್ತುತ ಮತ್ಸ್ಯದರ್ಶಿನಿಯನ್ನು ಪ್ರಾರಂಭಿಸಿ ಮೀನುಗಾರಿಕೆಗೆ ಪ್ರೋತ್ಸಾಹ ನೀಡುತ್ತಿದೆ.<br>ಉತ್ತರ ಕರ್ನಾಟಕದ ಹಾಗೂ ರಾಜ್ಯದ 12 ನಗರ ಪಾಲಿಕೆಗಳಲ್ಲಿ ನಿಗಮದ ವತಿಯಿಂದ ಮತ್ಸ್ಯದರ್ಶಿನಿಯನ್ನು ಆರಂಭಿಸಲು ನಗರಪಾಲಿಕೆ ಆಯುಕ್ತರು / ಜಿಲ್ಲಾಧಿಕಾರಿ ಯವರಿಂದ ನಿವೇಶನ ಪಡೆಯಲು ಕ್ರಮವಹಿಸಲಾಗುತ್ತಿದೆ. |
| ಈ) | ಮುಂಬರುವ ದಿನಗಳಲ್ಲಿ ಈ ಕೊರತೆ ನೀಗಿಸಲು ಹಾಗೂ ಅಭಿವೃದ್ಧಿ ಪಡಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು? | ಉತ್ತರ ಕರ್ನಾಟಕದ ಹಾಗೂ ರಾಜ್ಯದ 12 ನಗರ ಪಾಲಿಕೆಗಳಲ್ಲಿ ನಿಗಮದ ವತಿಯಿಂದ ಮತ್ಸ್ಯದರ್ಶಿನಿಗಳನ್ನು ಆರಂಭಿಸಲು ರೂ.15.00 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-169 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು